## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 211
ಸದಸ್ಯರ ಹೆಸರು : ಶ್ರೀ ಶಶೀಲ್ ಜಿ. ನಮೋಶಿ
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 14.02.2024

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದ ಎಲ್ಲಾ ಬಸ್ ನಿಲ್ದಾಣಗಳಲ್ಲಿ ಯಾವ ಬಸ್ಸು ಯಾವ ಸ್ಥಳಕ್ಕೆ ಹೋಗಿ ತಲುಪುತ್ತದೆ ಎನ್ನುವುದರ ಮಾಹಿತಿಯಿರುವ ಫಲಕಗಳನ್ನು ಅಳವಡಿಸಲಾಗಿದೆಯೇ; | ಸಾರಿಗೆ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮಾಹಿತಿ ಫಲಕ ಅಳವಡಿಸಿರುವ ಕುರಿತು ಕೈಗೊಂಡ ಕ್ರಮದ ಮಾಹಿತಿ ಈ ಕೆಳಕಂಡಂತಿದೆ:<br><br>**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**<br><br>ನಿಗಮದ ವ್ಯಾಪ್ತಿಯಲ್ಲಿ ಕಾರ್ಯಾಚರಣೆಯಲ್ಲಿರುವ ಎಲ್ಲಾ ಬಸ್ ನಿಲ್ದಾಣಗಳಲ್ಲಿ ಗಮ್ಯ ಸ್ಥಳಗಳಿಗೆ ನಿರ್ಗಮನಗಳ ವೇಳಾಪಟ್ಟಿಯನ್ನು ಅಳವಡಿಸಲಾಗಿರುತ್ತದೆ.<br><br>ಮುಂದಿನ ದಿನಗಳಲ್ಲಿ ವಾಹನಗಳ ಟ್ರ್ಯಾಕಿಂಗ್ ಮತ್ತು ನಿರ್ವಹಣಾ ವ್ಯವಸ್ಥೆ ಮತ್ತು ಪ್ರಯಾಣಿಕರ ಮಾಹಿತಿ ವ್ಯವಸ್ಥೆಯಡಿ (Vehicle Tracking & Monitoring System and Passenger Information System) ಎಲ್ಲಾ ವಾಹನಗಳಲ್ಲೂ ತಂದು ಎಲ್ಲಾ ಬಸ್ ನಿಲ್ದಾಣಗಳಲ್ಲಿ ಕ್ರಿಯಾತ್ಮಕ (Dynamic) ಆಗಮನ ಮತ್ತು ನಿರ್ಗಮನ ವೇಳಾಪಟ್ಟಿಯನ್ನು ಪ್ರಯಾಣಿಕರ ಮಾಹಿತಿಗಾಗಿ ಪ್ರದರ್ಶಿಸುವ ಯೋಜನೆಯನ್ನು ರೂಪಿಸಲಾಗುತ್ತಿದೆ.<br><br>**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ**<br><br>ನಿರ್ಭಯ ಯೋಜನೆಯಡಿಯಲ್ಲಿ, ಸಂಸ್ಥೆಯ ವ್ಯಾಪ್ತಿಯಲ್ಲಿ ಬರುವಂತಹ ನಿಲುಗಡೆ/ನಿಲ್ದಾಣಗಳಲ್ಲಿ 500 ಪ್ರಯಾಣಿಕರ ಮಾಹಿತಿ ಪ್ರದರ್ಶಕ ಫಲಕಗಳನ್ನು ಅಳವಡಿಸಲಾಗಿರುತ್ತದೆ. ಮಾಹಿತಿ ಪ್ರದರ್ಶಕ ಫಲಕಗಳಲ್ಲಿ ಸದರಿ ಬಸ್ ನಿಲ್ದಾಣಕ್ಕೆ/ನಿಲುಗಡೆಗೆ ಬರುವ ಬಸ್ಸು ಮತ್ತು ಮಾರ್ಗಗಳ ಅಂದಾಜು ಆಗಮನದ ಸಮಯದೊಂದಿಗೆ ಯಾವ ಸ್ಥಳಕ್ಕೆ ಹೋಗಿ ತಲುಪುತ್ತದೆ ಎಂಬ ಮಾಹಿತಿಯನ್ನು ಪ್ರದರ್ಶಿಸುತ್ತದೆ. |
| ಆ. | ಹಾಗಿದ್ದಲ್ಲಿ, ಇದರ ಜೊತೆಗೆ ಯಾವ ಬಸ್ಸು ಯಾವ ಸ್ಥಳ/ತಾಲ್ಲೂಕು/ಗ್ರಾಮಕ್ಕೆ ಎಷ್ಟು ಗಂಟೆಗೆ ನಿರ್ಗಮಿಸುವುದು/ಆಗಮಿಸುವುದು ಎಂಬ ವೇಳಾಪಟ್ಟಿಯನ್ನು ಸಹ ಅಳವಡಿಸುವ ಆಲೋಚನೆಯೇನಾದರೂ ಸರ್ಕಾರದ ಮುಂದಿದೆಯೇ: ಇದರಿಂದ ಪ್ರಯಾಣಿಕರ ಸಮಯ ಉಳಿತಾಯದ ಜೊತೆಗೆ ಸೂಕ್ತ ಸಮಯದಲ್ಲಿ ನಿಗಧಿತ ಸ್ಥಳಕ್ಕೆ ತಲುಪಲು ಅನುಕೂಲವಾಗುವುದರಿಂದ ಸರ್ಕಾರ ಕೂಡಲೇ ಕ್ರಮಕೈಗೊಳ್ಳುವುದೇ; | |
| ಇ. | ಯಾವ ಕಾಲಮಿತಿಯಲ್ಲಿ ರಾಜ್ಯದ ಎಲ್ಲಾ ಬಸ್ ನಿಲ್ದಾಣಗಳಲ್ಲಿ ಬಸ್ಸುಗಳ ಆಗಮನ/ನಿರ್ಗಮನದ ವೇಳೆಯನ್ನು ಫಲಕಗಳಲ್ಲಿ ಅಳವಡಿಸಲಾಗುವುದು? | |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | **<u>ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ</u>**<br>ಸಂಸ್ಥೆಯ ವ್ಯಾಪ್ತಿಯ ಹೋಬಳಿ/ಗ್ರಾಮೀಣ ಭಾಗದ ಕೆಲ ಸಣ್ಣ-ಪುಟ್ಟ ಬಸ್ ನಿಲ್ದಾಣಗಳನ್ನು ಹೊರತುಪಡಿಸಿ ಇನ್ನುಳಿದ ಎಲ್ಲ ಬಸ್ ನಿಲ್ದಾಣಗಳಲ್ಲಿ ವೇಳಾ ಪಟ್ಟಿಯನ್ನು ಅಳವಡಿಸಲಾಗಿದೆ.<br>ಮುಂದುವರೆದು, ಜಿಲ್ಲಾ/ತಾಲೂಕು ಮಟ್ಟದ 60 ಪ್ರಮುಖ ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕರಿಗೆ ಅನುಕೂಲವಾಗುವಂತೆ ಉದ್ಘೋಷಣಾ ವ್ಯವಸ್ಥೆ ಮೂಲಕ ವಾಹನಗಳ ಮಾಹಿತಿಯೊಂದಿಗೆ ತಲುಪಬೇಕಾದ ಸ್ಥಳದ ಮಾಹಿತಿಯನ್ನು ನೀಡಲಾಗುತ್ತಿದೆ.<br>ಹಂತಹಂತವಾಗಿ ಬಾಕಿ ಉಳಿದ ಬಸ್ ನಿಲ್ದಾಣಗಳಲ್ಲಿ ಬಸ್ಸುಗಳ ಆಗಮನ/ ನಿರ್ಗಮನದ ವೇಳೆಯನ್ನು ಫಲಕಗಳಲ್ಲಿ ಅಳವಡಿಸಲಾಗುವುದು<br>**<u>ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ</u>**<br>ನಿಗಮದ ಬಸ್ ನಿಲ್ದಾಣಗಳಲ್ಲಿ ಪ್ರದರ್ಶಿಸಲಾಗಿರುವ ವೇಳಾಪಟ್ಟಿಯು ಸಾರಿಗೆಗಳು ಬಸ್ ನಿಲ್ದಾಣದಿಂದ ಕಾರ್ಯಾಚರಣೆಯಾಗುವ ಸ್ಥಳ/ಊರಿನ ಹೆಸರು ಹಾಗೂ ನಿರ್ಗಮಿಸುವ ಸಮಯವನ್ನು ಒಳಗೊಂಡಿರುತ್ತದೆ<br><br>ಪ್ರಸ್ತುತ ನಿಗಮದ ವ್ಯಾಪ್ತಿಯಲ್ಲಿ ಕಾರ್ಯಾಚರಣೆಯಲ್ಲಿರುವ ಎಲ್ಲಾ ಬಸ್ ನಿಲ್ದಾಣಗಳಲ್ಲಿ ವಾಹನಗಳ ನಿರ್ಗಮನಗಳ ಸಮಯವು ಮುಖ್ಯವಾಗಿರುವುದರಿಂದ ಗಮ್ಯ ಸ್ಥಳಗಳಿಗೆ ನಿರ್ಗಮನಗಳ ವೇಳಾಪಟ್ಟಿಯನ್ನು ಅಳವಡಿಸಲಾಗಿರುತ್ತದೆ |

ಸಂಖ್ಯೆ: ಟಿಡಿ 04 ಟಿಸಿಕ್ಯೂ 2024

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು